ಮೈಸೂರು : ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿವಾಗದೆ ತಮ್ಮಲ್ಲಿರುವ ಪ್ರತಿಭೆಯ ಮೂಲಕ ಪ್ರಬಂಧ, ಚಿತ್ರಕಲೆ, ಕವನ ಬರೆಯುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಕಾಲೇಜಿನ ಎಲ್ಲ ಸಮಿತಿಗಳ ಪ್ರಧಾನ ಸಂಯೋಜಕ ಪ್ರೊ.ಎಂ.ಶಿವಣ್ಣ ತಿಳಿಸಿದರು.

ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ 'ಅನಾವರಣ' ವೇದಿಕೆ ಉದ್ಘಾಟನೆ ಸಮಾರಂಭದಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಪ್ರತಿಭೆಯನ್ನು ಹೊರತಂದು ಪ್ರೋತ್ಸಾಹಿಸುವ ಉದ್ದೇಶದಿಂದ 'ಅನಾವರಣ' ವೇದಿಕೆ ಕಲ್ಪಿಸಿಕೊಡಲಾಗಿದೆ. ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಪ್ರತಿಯೊಬ್ಬರಲ್ಲೂ ಒಂದಿಲ್ಲೊಂದು ಕಲೆಯಿರುತ್ತದೆ. ಅದನ್ನು ಹೊರತೆಗೆಯುವ ಪ್ರಯತ್ನ ಮಾಡಬೇಕು. ಅನಾವರಣಕ್ಕೆ ಬರೆದ ಚಿತ್ರ, ಬರಹಗಳಲ್ಲಿ ಉತ್ತಮವಾದವುಗಳಿಗೆ ಬಹುಮಾನ ನೀಡಲಾಗುತ್ತದೆ. ಕೊನೆಗೆ ವಾರ್ಷಿಕ ಸಂಚಿಕೆಯಲ್ಲೂ ಪ್ರಕಟಿಸಲಾಗುತ್ತದೆ ಎಂದು ವಿವರಿಸಿದರು.



ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯ ಹಿರಿಯ ಉಪನ್ಯಾಸಕ ವಿಜಯ್‌ರಾವ್, ಪ್ರಜ್ಞಾವಸ್ಥೆಯಲ್ಲಿ ಕಾಣುವ ಕನಸಿಗೆ ಮೂರ್ತ ರೂಪ ನೀಡಿದಾಗ ಅದು ಕಲೆಯಾಗುತ್ತದೆ. ಆದ್ದರಿಂದ ಕನಸು ಕಾಣುವ ಹಾಗೂ ಕಂಡ ಕನಸನ್ನು ಬರಹ, ಚಿತ್ರಕಲೆ, ಕವನದ ಮೂಲಕ ಹಿಡಿದಿಡುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ನಿದ್ರಾವಸ್ಥೆಯಲ್ಲಿ ಕಾಣುವ ಕನಸನ್ನು ಹಿಡಿದಿಡುವುದು ಕಷ್ಟ. ಯಾರು ತಮ್ಮ ಪ್ರಜ್ಞಾವಸ್ಥೆಯ ಕನಸನ್ನು ಹಿಡಿದಿಡುವಲ್ಲಿ ಸಮರ್ಥರಾಗುತ್ತಾರೋ ಅವರು ಕಲಾವಿದರೋ, ಕವಿಗಳೋ ಆಗಿ ರೂಪುಗೊಳ್ಳುತ್ತಾರೆ. ಆ ಪ್ರತಿಭೆ ಇಲ್ಲದವರು ಏನನ್ನೂ ಸಾಧಿಸಲಾಗುವುದಿಲ್ಲ. ಬೇರೆಯವರನ್ನು ಮೆಚ್ಚಿಸಲಿಕ್ಕೆ ಬರೆಯಬೇಕಾದ ಅಗತ್ಯವಿಲ್ಲ, ತನ್ನ ಮನಸ್ಸಿನ ಸಂತೋಷಕ್ಕಾಗಿ ಬರಹ, ಚಿತ್ರಕಲೆ ಬಿಡಿಸಬೇಕು. ಅದರಿಂದ ಸಿಗುವ ಖುಷಿ, ಸಮಾಧಾನ ವರ್ಣಿಸಲಾಗದು. ಆದ್ದರಿಂದ ಕಾಲೇಜಿನ ವಿದ್ಯಾರ್ಥಿನಿಯರು ತಮ್ಮ ಕನಸುಗಳನ್ನು ಚಿತ್ರಗಳ ಮೂಲಕ, ಬರಹಗಳ ಮೂಲಕ ಹಿಡಿದಿಡಬೇಕು ಎಂದರು.

'ಅನಾವರಣ' ವೇದಿಕೆ ಸಂಚಾಲಕರಾದ ಪ್ರೊ.ಕೆ.ಸಿ.ಸೋಮಣ್ಣ ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳ ಕ್ರಿಯಾಶೀಲತೆಗೆ ವೇದಿಕೆಯಾಗಿ ಅನಾವರಣ ಕೆಲಸ ಮಾಡುತ್ತಿದೆ. ತಮ್ಮ ಸಣ್ಣಸಣ್ಣ ಬರಹಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ. ಆದ್ದರಿಂದ ಕಾಲೇಜಿನ ವಿದ್ಯಾರ್ಥಿನಿಯರು ತಮ್ಮ ಪ್ರತಿಭೆಯ ಪ್ರದರ್ಶನಕ್ಕೆ ತಮ್ಮನ್ನು ತೆರೆದುಕೊಳ್ಳಬೇಕು ಎಂದರು.

ಸಮಾರಂಭದಲ್ಲಿ ಅಧ್ಯಾಪಕ ಕಾರ್ಯದರ್ಶಿ ಪ್ರೊ.ಸೋಮಣ್ಣ, ಸಾಂಸ್ಕೃತಿಕ ಸಮಿತಿ ಕಾರ್ಯದರ್ಶಿ ಪ್ರೊ.ಪಿ.ಶಿವಣ್ಣ, ಐಕ್ಯೂಎಸಿ ಸಂಚಾಲಕ ಡಾ.ರವಿಶಂಕರ್ ಹಾಜರಿದ್ದರು. ಇದಕ್ಕೂ ಮುನ್ನ ವಿದ್ಯಾರ್ಥಿಗಳ ಬರಹಗಳುಳ್ಳ 'ಅನಾವರಣ' ನಾಮಫಲಕಕ್ಕೆ ಟೇಪ್ ಕತ್ತರಿಸುವ ಮೂಲಕ ಚಾಲನೆ ನೀಡಲಾಯಿತು.